ತುಮಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ ಸಾಹೆಬರವರ ಕೋರ್ಟಿನಿಂದ.

ತಾರೀಖು 6ನೇ ಜುಲೈ 1884.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟ್ ಮಜಕೂರ ಮದ್ದಗಿರಿ, ಪಾವಗಡ, ಶಿರಾ, ಗುಬ್ಬಿ ಈ ತಾಲ್ಲೂಕುಗಳಲ್ಲಿ 1884—85ನೇ ತಾರೀಖಸಂವತ್ಸರದಲ್ಲಿ ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜಮಾಯಿಸತಕ್ಕ ಹಕ್ಕನ್ನು ಆಯಾಯ ತಾಲ್ಲೂಕು ಆಮಿಲರ ರೂಬರೂ ತಾಲ್ಲೂಕು ಕಛೇರಿಯಲ್ಲಿ ಇದರಡೀಲಿ ಕಂಡ ತಾರೀಖುಗಳಲ್ಲಿ ದಿವಿ 11 ಘಂಟೆ ಲಾಗಾಯತು ಹರಾಜು ಮಾಡಲಾಧೀತು.

ಷರತ್ತುಗಳು.

1. ಹರಾಜು ಕೈದಾವಕೂಡ್ಲೆ ಆಖೈರ ಸವಾಲ್‌ದಾರನು ಶೇಕಡಾ 25 ರೂಪಾಯಿ ಮೇರಿಗೆ ನಗದು ಠೇವಣಿಯನ್ನು ಇಡಬೇಕು, ಹರಾಜು ದೀರ್ವಾ ಸಾಹೆಬರಿಂದ ಮಂಜೂರಾದ ವಡನೆ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ ಪುನಹಾ ಹರಾಜು ಮಾಡಲ್ಪಟ್ಟು ನಷ್ಟ ಬಂದ ಮೊಬಲಗಿಗೆ ಮೊದಲಿನ ಚಡ ಸವಾಲ್‌ದಾರನನ್ನು ಗುರಿಮಾಡಲಾಧೀತು, ಮತ್ತು ಠೇವಣಿಯನ್ನು ಸರ್ಕಾರಕ್ಕೆ ಜೀರಿಸಿ ಕೊಳ್ಳಲಾಧೀತು.

2. ಕುರಂಗಡ ಕಲ್ಲುಗಳನ್ನು ತೆಗಿಯುವ ವುದ್ದಿಶ್ಯ ಭೂಮಿ ಸಾಗುವಳಿಗೆ ನಾಲಾಯಖಾಗುವಂತೆ ಮಾಡಕೂಡದು ಗುಂಡಿಗಳನ್ನು, ಇಜಾರದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯ ಕುರಂಗದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳಿಗೆ ಕೊಡಲಾಧೀತು, ಹಾಗೆ ಕೊಡೋಣಪರಿಂದ ಕುರಂಗದ ಕಲ್ಲು ಇಜಾರದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್‌ದಾರರಲ್ಲ.

5. ಹರಾಜು ಮೊಬಲಗಿನ ಮೇಲೆ ಶೇಕಡಾ $6\frac{1}{4}$ ರೂಪಾಯಿ ಮೇರಿಗೆ ಲೋಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪಸೀಲ್ ತಿಳಿಯಬೇಕಾಗಿದ್ದರೆ ಆಯಾಯ ತಾಲ್ಲೂಕು ಆಮಿಲರಿಗೆ ಬರದು ತಿಳದುಕೊಳ್ಳ ಬಹುದು.

ಹರಾಜು ತಾರೀಖು.

ಮದ್ದಗಿರಿ ತಾಲ್ಲೂಕು	1884ನೇ ಜುಲೈ 15.	ಪಾವಗಡ ತಾಲ್ಲೂಕು	1884ನೇ ಜುಲೈ 21.
ಶಿರಾ ತಾಲ್ಲೂಕು ..	ಡಿಟೋ 26.	ಗುಬ್ಬಿ ತಾಲ್ಲೂಕು ..	ಡಿಟೋ 31.

ಮಹಮ್ಮದಲ್ಲಿ,
ಫೂರ್ ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ತಾರೀಖು 2ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಜೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುಕಾಲೀಕ ಯಾ ಹಕ್ದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯತು ಎಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು.